# KARNATAKA STATE POLLUTION CONTROL BOARD

## CAUTION NOTICE

### FOR INDUSTRIES/ ORGANIZATIONS/ LOCAL BODIES FOR ESTABLISHMENT OF PRIMARY EFFLUENT TREATMENT PLANT / COMMON EFFLUENT TREATMENT PLANT / SEWAGE TREATMENT PLANT

**The Hon'ble Supreme Court of India in its judgment passed in Writ Petition (C) No. 375 of 2012 dated 22.02.2017 has passed certain orders regarding the establishment of Primary Effluent Treatment Plant, Common Effluent Treatment Plant and Sewage Treatment Plant. Some of the contents of the judgment of the Hon'ble Supreme Court of India being relevant are reproduced below.**

"The industry requiring "consent to operate", can be permitted to run, only **if its primary effluent treatment plant, is functional.** We therefore consider it just and appropriate **to direct the concerned state pollution control boards, to issue notices to all industrial units, which require "consent to operate", by way of a common advertisement, requiring them to make their primary effluent treatment plants fully operational, within three months from today. On the expiry of the notice period of three months, the concerned State Pollution Control Board (s) are mandated to carry out inspections to verify, whether or not, each industrial unit requiring "consent to operate", has a functional primary effluent treatment plant. Such of the industrial units, which have not been able to make their primary effluent treatment plant fully operational, within the notice period, shall be restrained from any further industrial activity.** This direction may be implemented by requiring the concerned electricity supply and distribution agency to disconnect the electricity connection of the defaulting industry. We therefore hereby further direct, that in case the concerned State Pollution Control Boards make a recommendation to the concerned electrical supply and distribution agency/company, to disconnect electricity supply to an industry, for the reason that its primary effluent treatment plant is not functional, it shall Honour such recommendation and shall disconnect the electricity supply to such defaulting industrial concern forthwith."

Under the circumstances, all the industries concerned whether existing / operating with "consent to operate" and/or whether a new industry intending to establish itself after obtaining "consent to establish" from the Karnataka State Pollution Control Board will have to necessarily have a primary effluent treatment plant within the industry, which is functional.

In terms of the directions contained in the judgment of the Hon'ble Supreme Court cited supra, the Karnataka State Pollution Control Board accordingly hereby issues this caution notice requiring all industries/industrial units which have obtained the "consent to operate" or would require "consent to operate" from the Board to ensure that these industrial units make their primary effluent treatment plants fully operational within three months from 22.02.2017 i.e. on or before 22.05.2017. Thereafter the board will carry out mandatory inspections to verify all the industrial units requiring "consent to operate" including all the industrial units which are already operating with consent to operate obtained from the Board, to find out whether such industrial units has a functional primary effluent treatment plant.

Please note that if any such industrial unit(s) are found having no effluent treatment plant or which are not fully operational, the same will be restrained from carry out any further industrial activity.

This is for the general information of all industrial units as directed by the Hon'ble Supreme Court of India in the judgment referred to above.

The Hon'ble Supreme Court of India in the aforesaid judgment has further held at paragraph 8 as under.

In view of the fact, that the financial position has been taken care of, as has been expressed above, we are of the view that the setting up of "common effluent treatment plant", should be taken up as an urgent mission. With reference to common effluent treatment plants, which are already under implementation, we hope and expect, that they would be completed within the time lines already postulated. With reference to common effluent treatment plants, which are yet to be set up, we consider it just and appropriate to direct, the concerned State Governments (including, the concerned Union Territories) to complete the same within a period of three years, from today. We are also of the view, that while acquiring land for the 'common effluent treatment plants', the concerned State Government (including, the concerned Union Territories) will acquire such additional land as may be required for setting up "zero liquid discharge plants" if and when required in future.

Under paragraph 10 of the said judgment, the Hon'ble Supreme Court has further categorically ordered that the onus to operate the existing common effluent treatment plants, rests on the Municipalities (and/or local bodies).

At paragraph 12 of the said judgment, the Hon'ble Supreme Court of India has observed as under.

"12. We are of the view, that in the manner suggested above, the malady of sewer treatment, should also be dealt with simultaneously. We therefore hereby direct, that 'sewage treatment plants', shall also be set up and made functional, within the time lines and the format, expressed hereinabove."

In view of the foregoing, the concerned authorities are hereby required to take necessary steps to forthwith implement the order of the Hon'ble Supreme Court as laid down by the Hon'ble Supreme Court in the judgment cited supra.

**All concerned shall treat this as Notice of the Board and comply with directions of the Hon'ble Supreme Court within stipulated time limit.**

**Copy of the judgement of Hon'ble Supreme Court is available at http://kspcb.gov.in/judge_375-2017.pdf**
**For more details contact: 080 - 25581383, 25589112/113**

Date : 18-03-2017

Issued in Public Interest by

**Lakshman,** B.E., M.I.E.
**Chairman**

**KARNATAKA STATE POLLUTION CONTROL BOARD**
#49, Parisara Bhavan, Church Street, Bangalore - 560 001

**S. Shanthappa,** I.F.S.
**Member Secretary**

"To protect and improve the natural environment including forests, lakes, rivers and wildlife and to have compassion for living creatures"
- Is the fundamental duty of every citizen of India, enshrined in our constitution

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

## ಕಲುಷಿತ ನೀರಿಗೆ ಪ್ರಾಥಮಿಕ ಸಂಸ್ಕರಣಾ ಘಟಕ, ಸಾಮೂಹಿಕ ಸಂಸ್ಕರಣಾ ಘಟಕ ಮತ್ತು ರೊಚ್ಚು ನೀರು ಸಂಸ್ಕರಣಾ ಘಟಕ ಅಳವಡಿಸುವ ಬಗ್ಗೆ ಕಾರ್ಖಾನೆ/ಸಂಸ್ಥೆ/ಘಟಕಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳ ಗಮನಕ್ಕಾಗಿ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ (ಸಿ) ಸಂಖ್ಯೆ 375/2012ಗೆ ಸಂಬಂಧಿಸಿದಂತೆ ದಿನಾಂಕ 22.02.2017 ರಂದು ನೀಡಿದ ತೀರ್ಪಿನಲ್ಲಿ ಕಲುಷಿತ ನೀರಿಗೆ ಪ್ರಾಥಮಿಕ ಸಂಸ್ಕರಣಾ ಘಟಕ, ಸಾಮೂಹಿಕ ಸಂಸ್ಕರಣಾ ಘಟಕ ಮತ್ತು ರೊಚ್ಚು ನೀರು ಸಂಸ್ಕರಣಾ ಘಟಕ ಅಳವಡಿಸುವ ಕುರಿತು ಆದೇಶಗಳನ್ನು ನೀಡಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಒಳಾಂಶಗಳನ್ನು ಈ ಕೆಳಕಂಡಂತೆ ಕಾರ್ಖಾನೆ/ಸಂಸ್ಥೆ/ಘಟಕಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳ ಗಮನಕ್ಕಾಗಿ ತರಲಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಎಲ್ಲಾ ಕಾರ್ಖಾನೆ/ಸಂಸ್ಥೆ/ಘಟಕಗಳು ಚಾಲನೆ ಮಾಡುವ ಪೂರ್ವದಲ್ಲಿ ಕಲುಷಿತ ನೀರಿಗೆ ಪ್ರಾಥಮಿಕ ಸಂಸ್ಕರಣಾ ಘಟಕಗಳನ್ನು ಅಳವಡಿಸಿ ಚಾಲನಾ ಸ್ಥಿತಿಯಲ್ಲಿ ಇಟ್ಟು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಚಾಲನಾ ಸಮ್ಮತಿ ಪತ್ರವನ್ನು **(Consent for operation)** ಪಡೆಯುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಮಾಲಿನ್ಯ ನಿಯಂತ್ರಣ ಮಂಡಳಿಗಳು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಕಾರ್ಖಾನೆ/ಸಂಸ್ಥೆ/ಘಟಕಗಳು ಆದೇಶದ ದಿನದಿಂದ 3 ತಿಂಗಳ ಒಳಗಾಗಿ ಕಲುಷಿತ ನೀರಿಗೆ ಪ್ರಾಥಮಿಕ ಸಂಸ್ಕರಣಾ ಘಟಕವನ್ನು ಅಳವಡಿಸಿ ಸಂಪೂರ್ಣ ಚಾಲನಾ ಸ್ಥಿತಿಯಲ್ಲಿಟ್ಟುಕೊಂಡು ಚಾಲನಾ ಸಮ್ಮತಿ ಪತ್ರವನ್ನು ಪಡೆಯುವ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ಜಾಹೀರಾತು ಮೂಲಕ ತಿಳುವಳಿಕೆ ನೀಡುವಂತೆ ನಿರ್ದೇಶಿಸಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ದಿನದಿಂದ 3 ತಿಂಗಳ ನಂತರ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಚಾಲನಾ ಸಮ್ಮತಿ ಪತ್ರವನ್ನು ಪಡೆಯಬೇಕಾಗಿರುವ ಎಲ್ಲಾ ಕಾರ್ಖಾನೆ/ಸಂಸ್ಥೆ/ಘಟಕಗಳು ಕಲುಷಿತ ನೀರಿಗೆ ಪ್ರಾಥಮಿಕ ಸಂಸ್ಕರಣಾ ಘಟಕಗಳನ್ನು ಕಡ್ಡಾಯವಾಗಿ ಅಳವಡಿಸಿ ಸಂಪೂರ್ಣ ಚಾಲನಾ ಸ್ಥಿತಿಯಲ್ಲಿರುವ ಬಗ್ಗೆ ಪರಿಶೀಲಿಸಲಾಗುವುದು. ಕಲುಷಿತ ನೀರಿಗೆ ಪ್ರಾಥಮಿಕ ಸಂಸ್ಕರಣಾ ಘಟಕಗಳನ್ನು ಅಳವಡಿಸದೆ ಅಥವಾ ಪ್ರಾಥಮಿಕ ಸಂಸ್ಕರಣಾ ಘಟಕಗಳನ್ನು ಅಳವಡಿಸಿ ಸಂಪೂರ್ಣ ಚಾಲನಾ ಸ್ಥಿತಿಯಲ್ಲಿಟ್ಟಿರದ ಕಾರ್ಖಾನೆ/ಸಂಸ್ಥೆ/ಘಟಕಗಳ ವಿರುದ್ಧ ಅವುಗಳು ನಡೆಸುತ್ತಿರುವ ಕಾರ್ಯಚರಣೆಗಳನ್ನು ನಿರ್ಭಂಧಿಸಲಾಗುವುದು.

ಅಂತಹ ಉಲ್ಲಂಘನೆ ಮಾಡಿದ ಕಾರ್ಖಾನೆ/ಸಂಸ್ಥೆ/ಘಟಕಗಳ ಕಾರ್ಯಚರಣೆಗಳನ್ನು ಸ್ಥಗಿತಗೊಳಿಸಲು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಶಿಫಾರಸ್ಸು ಮಾಡಲಾಗುವುದು. ಸದರಿ ಶಿಫಾರಸ್ಸಿನ ಅನ್ವಯ ವಿದ್ಯುತ್ ಸರಬರಾಜು ಕಂಪನಿಗಳು ಕಡ್ಡಾಯವಾಗಿ ಅದನ್ನು ಪಾಲನೆ ಮಾಡಿ ವಿದ್ಯುತ್ ಸಂಪರ್ಕಗಳನ್ನು ಸ್ಥಗಿತಗೊಳಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಈಗಾಗಲೇ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಚಾಲನಾ ಸಮ್ಮತಿ ಪತ್ರ **(Consent for operation)** ಪಡೆದು ಕಾರ್ಯನಿರ್ವಹಿಸುತ್ತಿರುವ ಅಥವಾ ಈಗಾಗಲೇ ಸ್ಥಾಪನಾ ಸಮ್ಮತಿ ಪತ್ರ **(Consent for Establishment)** ಪಡೆದು ಚಾಲನಾ ಸಮ್ಮತಿ ಪತ್ರ **(Consent for operation)** ಪಡೆಯಬೇಕಿರುವ ಎಲ್ಲಾ ಕಾರ್ಖಾನೆ/ಸಂಸ್ಥೆ/ಘಟಕಗಳು ಅಥವಾ ಹೊಸದಾಗಿ ಪ್ರಾರಂಭಿಸಬೇಕಾಗಿರುವ ಕಾರ್ಖಾನೆ/ಸಂಸ್ಥೆ/ಘಟಕಗಳು ಕಲುಷಿತ ನೀರಿಗೆ ಪ್ರಾಥಮಿಕ ಸಂಸ್ಕರಣಾ ಘಟಕಗಳನ್ನು ಅಳವಡಿಸಿ ಚಾಲನಾ ಸ್ಥಿತಿಯಲ್ಲಿಡಬೇಕಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಈಗಾಗಲೇ ಮಂಡಳಿಯಿಂದ ಚಾಲನಾ ಸಮ್ಮತಿ ಪತ್ರ ಪಡೆದು ಕಲುಷಿತ ನೀರಿಗೆ ಪ್ರಾಥಮಿಕ ಸಂಸ್ಕರಣಾ ಘಟಕಗಳನ್ನು ಅಳವಡಿಸದೆ ಇರುವ ಅಥವಾ ಚಾಲನಾ ಸಮ್ಮತಿ ಪತ್ರ ಪಡೆಯಬೇಕಾಗಿರುವ ಕಾರ್ಖಾನೆ/ಸಂಸ್ಥೆ/ಘಟಕಗಳು 3 ತಿಂಗಳು ಅಂದರೆ 22/5/2017 ರ ಒಳಗೆ ಕಲುಷಿತ ನೀರಿಗೆ ಪ್ರಾಥಮಿಕ ಸಂಸ್ಕರಣಾ ಘಟಕಗಳನ್ನು ಅಳವಡಿಸಿ ಕಾರ್ಯಚರಣೆಗೊಳಿಸುವುದು ಕಡ್ಡಾಯ ಎನ್ನುವ ಬಗ್ಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಮೂಲಕ ಎಚ್ಚರಿಕೆ ನೀಡುತ್ತದೆ ಹಾಗೂ ಈ ಮೇಲೆ ಹೇಳಿದ ದಿನಾಂಕ 22/5/2017 ರ ನಂತರ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಈಗಾಗಲೇ ಚಾಲನಾ ಸಮ್ಮತಿ ಪತ್ರವನ್ನು ಪಡೆದಿರುವ ಹಾಗೂ ಚಾಲನಾ ಸಮ್ಮತಿ ಪತ್ರವನ್ನು ಕಡ್ಡಾಯವಾಗಿ ಪಡೆಯಬೇಕಿರುವ ಘಟಕಗಳು ಕಲುಷಿತ ನೀರಿಗೆ ಪ್ರಾಥಮಿಕ ಸಂಸ್ಕರಣಾ ಘಟಕಗಳನ್ನು ಅಳವಡಿಸಿಕೊಂಡು ಕಾರ್ಯನಿವಹಿಸುತ್ತಿರುವ ಬಗ್ಗೆ ಪರಿವೀಕ್ಷಣೆ ನಡೆಸಲಾಗುವುದು.

ಮುಂದುವರೆದಂತೆ ಸ್ಥಳೀಯ ಸಂಸ್ಥೆಗಳು ಕಲುಷಿತ ನೀರನ್ನು ಶುದ್ಧೀಕರಿಸಲು ಸಾಮೂಹಿಕ ಕಲುಷಿತ ನೀರು ಸಂಸ್ಕರಣಾ ಘಟಕವನ್ನು **(Common Effluent Treatment Plant)** ಸ್ಥಾಪಿಸುವ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯವು ತೀರ್ಪಿನ ಖಂಡಿಕೆ 8 ರಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತದೆ;

ಸಾಮೂಹಿಕ ಕಲುಷಿತ ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಕುರಿತು ಹಣಕಾಸು ಪರಿಸ್ಥಿತಿಯನ್ನು ಪರಿಗಣನೆಗೆ ತೆಗೆದುಕೊಂಡು ತುರ್ತಾಗಿ ಕಾರ್ಯ ನಿರ್ವಹಿಸಲು ಸ್ಥಳೀಯ ಸಂಸ್ಥೆಗಳಿಗೆ ಆದೇಶಿಸಿರುತ್ತದೆ. ಅದರಂತೆ ಈಗಾಗಲೇ ಅನುಷ್ಠಾನಗೊಳ್ಳುತ್ತಿರುವ ಸಾಮೂಹಿಕ ಕಲುಷಿತ ನೀರು ಸಂಸ್ಕರಣಾ ಘಟಕಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಗುರಿ ನೀಡಲಾದ ಕಾಲ ಮಿತಿಯೊಳಗೆ ಅನುಷ್ಠಾನಗೊಳ್ಳುವ ಬಗ್ಗೆ ಅಪೇಕ್ಷಿಸಿರುತ್ತದೆ ಹಾಗೂ ಇನ್ನೂ ಮುಂದೆ ಸ್ಥಾಪಿಸಲು ಉದ್ದೇಶಿಸಿರುವ ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ನ್ಯಾಯಾಲಯದ ಆದೇಶದ ದಿನಾಂಕದಿಂದ 3 ವರ್ಷಗಳ ಅವಧಿಯೊಳಗೆ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳಿಗೆ (ಕೇಂದ್ರಾಡಳಿತ ಪ್ರದೇಶಗಳು ಸೇರಿದಂತೆ) ನಿರ್ದೇಶಿಸಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಾಮೂಹಿಕ ಕಲುಷಿತ ನೀರು ಸಂಸ್ಕರಣಾ ಘಟಕಗಳ ಸ್ಥಾಪನೆ ಕುರಿತಾಗಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಭವಿಷ್ಯದಲ್ಲಿ ಅಗತ್ಯತೆಗೆ ತಕ್ಕಂತೆ ಶೂನ್ಯ ದ್ರವ ವಿಸರ್ಜಿಸುವ ಘಟಕಗಳ ಸ್ಥಾಪನೆಗೆ ಬೇಕಾಗುವ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕ್ಕೊಳ್ಳುವುದು ಸಮಂಜಸವೆಂದು ಅಭಿಪ್ರಾಯ ಪಟ್ಟಿರುತ್ತದೆ.

ಮುಂದುವರೆದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ತೀರ್ಪಿನ ಕಂಡಿಕೆ 10ರಲ್ಲಿ ಹಾಲಿ ಕಾರ್ಯಚರಣೆಯಲ್ಲಿರುವ ಸಾಮೂಹಿಕ ಕಲುಷಿತ ನೀರು ಸಂಸ್ಕರಣಾ ಘಟಕಗಳ ನಿರ್ವಹಣೆ/ಕಾರ್ಯಚರಣೆಯು ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆಂದು ಸ್ಪಷ್ಟವಾಗಿ ಆದೇಶಿಸಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ಆದೇಶದ ಖಂಡಿಕೆ 12 ರಲ್ಲಿ ಈಕೆಳಕಂಡಂತೆ ಗಮನಿಸಿರುತ್ತದೆ.

"12. ನಮ್ಮ ಅಭಿಪ್ರಾಯದಂತೆ ಈ ಮೇಲೆ ವ್ಯಕ್ತಪಡಿಸಿದಂತೆ ರೊಚ್ಚು ನೀರು ಸಂಸ್ಕರಣಾ ಘಟಕಗಳ **(Sewage Treatment Plant)** ಅವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ನಿಗದಿತ ಸಮಯದೊಳಗೆ ರೊಚ್ಚು ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿ ಅವುಗಳು ಕಾರ್ಯನಿರ್ವಹಿಸುವಂತೆ ನಿರ್ದೇಶಿಸಿರುತ್ತದೆ ಹಾಗೂ ಸಂಬಂಧಪಟ್ಟ ಸಂಸ್ಥೆಗಳು ಈ ಬಗ್ಗೆ ಅಗತ್ಯ ಕ್ರಮಗಳನ್ನು ಕೂಡಲೇ ಕೈಗೊಳ್ಳುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಆದೇಶಿಸಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕುರಿತು ಆದೇಶಿಸಿದಂತೆ ಸಂಬಂಧಪಟ್ಟ ಎಲ್ಲಾ ಕಾರ್ಖಾನೆ/ಸಂಸ್ಥೆ/ಘಟಕಗಳು ಮತ್ತು ಸ್ಥಳೀಯ ಸಂಸ್ಥೆಗಳು ಚಾಚು ತಪ್ಪದೇ ಅನುಷ್ಠಾನಗೊಳಿಸುವ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಮೂಲಕ ಎಚ್ಚರಿಕೆ ನೀಡುತ್ತದೆ.

ಈ ಪ್ರಕಟಣೆಯನ್ನೆ ಮಂಡಳಿಯ ನೋಟಿಸ್ ಎಂದು ಪರಿಗಣಿಸಿ, ಸಂಬಂಧಪಟ್ಟವರೆಲ್ಲರೂ ಮಾನ್ಯ ಸರ್ವೋಚ್ಚ ನ್ಯಾಯ್ಯಾಲಯದ ಆದೇಶವನ್ನು ನಿಗದಿಪಡಿಸಿದ ಸಮಯದೊಳಗೆ ಅನುಷ್ಠಾನಗೊಳಿಸತಕ್ಕದು.

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರತಿಯು **http://kspcb.gov.in/judge_375-2017.pdf** ನಲ್ಲಿ ಲಭ್ಯವಿದೆ, ಹೆಚ್ಚಿನ ವಿವರಗಳಿಗೆ **080 - 25581383, 25589112/113** ಸಂಪರ್ಕಿಸಿ

ದಿನಾಂಕ : 18-03-2017

ಸಾರ್ವಜನಿಕರ ಹಿತದಿಂದ ಪ್ರಕಟಿಸಿದವರು

**ಲಕ್ಷ್ಮಣ್**, ಬಿ.ಇ., ಎಂಬಿಇ
ಅಧ್ಯಕ್ಷರು

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು – 560 001

**ಎಸ್. ಶಾಂತಪ್ಪ**, ಭಾ.ಅ.ಸೇ.,
ಸದಸ್ಯ ಕಾರ್ಯದರ್ಶಿ

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು" - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ